**ಓ.ಎಸ್. ನಂ. 713/2014 ಪಿ.ಡಬ್ಲೂ-1 ಹೆಸರು - ಪಿ. ರಾಜೇಶ**

**ಸಾಕ್ಷಿಯನ್ನು ದಿನಾಂಕಃ 16/06/2023 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಶ್ರೀ. ಕೆ.ಎಸ್.ಕೆ. 3 ನೇ ಪ್ರತಿವಾದಿ ಪರ ವಕೀಲರಿಂದಃ-**

ಮಾದಯ್ಯ @ ನಂಜಿ ಮಾದಯ್ಯ ರವರಿಗೆ ಮಾದಮ್ಮ ಎನ್ನುವ ಹೆಂಡತಿ ಮತ್ತು 7 ಜನ ಮಕ್ಕಳು ಎಂದರೆ ಸರಿ. ಸದರಿ ಮಾದಯ್ಯ @ ನಂಜಿ ಮಾದಯ್ಯ ರವರ ಮಕ್ಕಳ ಹೆಸರು ಸಿದ್ದಯ್ಯ, ಮಾದಪ್ಪ, ಬಸವಯ್ಯ, ಚಿಕ್ಕಮಾದಯ್ಯನ ಮಲಯಯ್ಯ, ದೊಡ್ಡತಾಯಮ್ಮ, ಸ್ವಾಮಿ ಮತ್ತು ಚಿಕ್ಕತಾಯಮ್ಮ ಎಂದರೆ ಸರಿ.

ನನ್ನ ತಂದೆ ಪೊನ್ನಯ್ಯ ರವರ ತಂದೆಯ ಹೆಸರು ಮೂಗಯ್ಯ @ ವರದಯ್ಯ. ಮೂಗಯ್ಯ @ ವರದಯ್ಯ ರವರಿಗೆ 2 ಹೆಂಡತಿಯರು ಅವರ ಹೆಸರು ಮನಿಯಮ್ಮ ಮತ್ತು ಸಣ್ಣಮ್ಮ. ಸಣ್ಣಮ್ಮ ರವರಿಗೆ ಮಕ್ಕಳು ಇರಲಿಲ್ಲ ಎಂದರೆ ಸರಿ. ಮೂಗಯ್ಯ @ ವರದಯ್ಯ ಮತ್ತು ಮನಿಯಮ್ಮ ರವರಿಗೆ 7 ಜನ ಮಕ್ಕಳು. ಅವರ ಹೆಸರು ಹುಚ್ಚಮ್ಮ, ಚಿಕ್ಕಮ್ಮ, ಹೊಂಬಾಳಮ್ಮ, ಪೊನ್ನಯ್ಯ, ಶಿವಮ್ಮ, ಮಾಯಮ್ಮ ಮತ್ತು ಬಾಲನಾಗಮ್ಮ ಎಂದರೆ ಸರಿ. ಸಾಕ್ಷಿ ಮುಂದುವರೆದು ಬಾಲನಾಗಮ್ಮನನ್ನು ಹೊರತುಪಡಿಸಿ ಇತರೆಯವರು ಮೃತಪಟ್ಟಿದ್ದಾರೆ ಎಂದು ನುಡಿಯುತ್ತಾರೆ. ನನ್ನ ತಂದೆಯ ಸಹೋದರಿಯರ ಪೈಕಿ ಬಾಲನಾಗಮ್ಮನನ್ನು ಹೊರತುಪಡಿಸಿ ಇತರೆಯವರು ಮದುವೆಯಾಗದೇ ಮೃತಪಟ್ಟಿದ್ದಾರೆ. ನನ್ನ ತಂದೆ ಪೊನ್ನಯ್ಯನಿಗೆ 5 ಜನ ಮಕ್ಕಳು.

ದಾವಾ ಆಸ್ತಿಯ ಖಾತೆ ಬಸವಯ್ಯ ಬಿನ್ ನಂಜಿ ಮಾದಯ್ಯ ರವರ ಹೆಸರಿನಲ್ಲಿ ಇದೆ ಎಂದರೆ ಸರಿಯಲ್ಲ. ಪ್ರತಿವಾದಿಯರು ಕುಟುಂಬ ಮತ್ತು ನಮ್ಮ ಕುಟುಂಬ ಬೇರೆ ಬೇರೆ ಎಂದರೆ ಸರಿ. ದಾವಾ ಆಸ್ತಿಗೆ ಸಂಬಂಧಿಸಿದಂತೆ 3 ನೇ ಪ್ರತಿವಾದಿಯು ತನ್ನ ಸಹೋದರನ ಮೇಲೆ ವಿಭಾಗಕ್ಕಾಗಿ ಅಸಲು ದಾವಾ 245/2016 ರಲ್ಲಿ ದಾವೆ ಸಲ್ಲಿಸಿದ್ದಾರೆ ಎಂದರೆ ಸರಿ. ದಾವಾ ಸ್ವತ್ತು ಪ್ರತಿವಾದಿಯರ ಕುಟುಂಬಕ್ಕೆ ಸೇರಿದ್ದು ಎಂದರೆ ಸರಿಯಲ್ಲ.

3 ನೇ ಪ್ರತಿವಾದಿಯು 1 ನೇ ಪ್ರತಿವಾದಿಯ ವಿರುದ್ದ ಅಸಲು ದಾವಾ ಸಂಖ್ಯೆ 45/2012 ರಲ್ಲಿ ಯಾವುದೇ ದಾವೆ ಸಲ್ಲಿಸಿರಲಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಮೇಲೆ ನಮಗೆ ಯಾವುದೇ ಹಕ್ಕು, ಹಿತಾಸಕ್ತಿ ಮತ್ತು ಸ್ವಾಧೀನ ಇಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯರು ದಾವಾ ಸ್ವತ್ತಿಗೆ ಯಾವುದೇ ತೊಂದರೆ ನೀಡಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಅಗತ್ಯ ಪಕ್ಷಗಾರರನ್ನ ದಾವೆಗೆ ಸೇರಿಸಿಲ್ಲದ ಕಾರಣ ದಾವೆ ಊರ್ಜಿತವಲ್ಲ ಎಂದರೆ ಸರಿಯಲ್ಲ. ಈ ನ್ಯಾಯಾಲಯಕ್ಕೆ ಈ ದಾವೆ ವಿಚಾರಣೆ ಮಾಡುವ ಅಧಿಕಾರ ವ್ಯಾಪ್ತಿ ಇಲ್ಲ ಎಂದರೆ ಸರಿಯಲ್ಲ. ನಾನು ಕೋರಿರುವ ಪರಿಹಾರಕ್ಕೆ ಅರ್ಹನಲ್ಲ ಎಂದರೆ ಸರಿಯಲ್ಲ.

( 1 ಮತ್ತು 2 ನೇ ಪ್ರತಿವಾದಿಯರು ಮತ್ತು ಅವರ ಪರ ವಕೀಲರನ್ನು ಕರೆಸಲಾಯಿತು ಅವರು ಗೈರು ಹಾಜರು ಇರುತ್ತಾರೆ, ಆದೇಶ ಪುಟಗಳನ್ನು ಪರಿಶೀಲಿಸಲಾಗಿ ಈಗಾಗಲೇ ಸಾಕಷ್ಟು ಸಮಯಾವಕಾಶ ನೀಡಲಾಗಿದೆ. ಆದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು. )

ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

**ಓ ಹೇ ಕೇ ಸ ಇದೆ ಎಂ ಓ**

ಸಹಿ/-

1 **ನೇ ಹೆಚ್ಚುವರಿ ಸಿ.ಜೆ ಮತ್ತು ಪ್ರದನ್ಯಾದಂ**

**ನಂಜನಗೂಡು**